ಅಂತಹ ಕೆಲಸಗಳಿಗೆ ಬಜೆಟ್‌ನಲ್ಲಿ ಮೊದಲ ಆದ್ಯತೆ ಕೊಟ್ಟು, ನಮ್ಮ ನೀರಾವರಿ ಇಲಾಖೆಯ ಮೂಲಕವೇ ಆ ಕೆಲಸವನ್ನು ಮಾಡಿ ಮುಗಿಸಬೇಕೆಂದಿದ್ದೇವೆ. ಈ ಬಗ್ಗೆ ಇಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಎ. ಕರಿಯಗೌಡ ಪಾಟೀಲ್.—ಮುಳವಾಡ ಏತ ನೀರಾವರಿ ಯೋಜನೆ ಸಹ ಇದರ ಒಂದು ವ್ಯಾಪ್ತಿಯಲ್ಲಿ ಬರುತ್ತದೆಯೇ ?

ಶ್ರೀ ಹೆಚ್ ಡಿ. ದೇವೇಗೌಡ.—ಬೃಹತ್ ನೀರಾವರಿ ಯೋಜನೆಗಳ ವ್ಯಾಪ್ತಿಯಲ್ಲಿ ಈ ಯೋಜನೆ ಬರುತ್ತದೆ. ಅಪ್ಪರ್-ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಬರುವಂತಹ ಏತ ನೀರಾವರಿ ಯೋಜನೆಗಳನ್ನು ಕೈ ಕೊಳ್ಳಲು ಬೇಕಾದಂಥ ೪೫೦ ಕೋಟಿ ರೂಪಾಯಿಗಳನ್ನು ಪಡೆದುಕೊಳ್ಳಲು ನಮ್ಮ ಒಂದು ಅರಿಕೆಯನ್ನು ವಿಶ್ವಬ್ಯಾಂಕ್ ಮುಂದೆ ಮಂಡನೆ ಮಾಡಿರುವುದರಲ್ಲಿ ಈ ಯೋಜನೆ ಸಹ ಸೇರಿದೆ. ಇದರ ಒಂದು ಕೆಲಸವನ್ನು ಪ್ರಾರಂಭ ಮಾಡುವಾಗ ಇದನ್ನು ಏತ ನೀರಾವರಿ ನಿಗಮದ ಮೂಲಕ ಮಾಡಿಸಬೇಕೇ ಅಥವಾ ಮೇಜರ್ ಇರಿಗೇಷನ್ ಇಲಾಖೆ ಮೂಲಕ ಮಾಡಿಸಬೇಕೇ ಎಂಬ ಬಗ್ಗೆ ಒಂದು ನಿರ್ಣಯವನ್ನೂ ಕೈ ಗೊಳ್ಳಲಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಈ ಏತ ನೀರಾವರಿ ನಿಗಮವನ್ನು ಬಹಳ ವರ್ಷಗಳಿಂದ ಯೋಚನೆ ಮಾಡಿ ಈಗ ರಚನೆ ಮಾಡಿರುವುದು. ಈಗ ಒಂದು ಎಕರೆಗೆ ೮ ರಿಂದ ಹತ್ತು ಸಾವಿರ ರೂಪಾಯಿಗಳವರೆಗೆ ಹಣ ಖರ್ಚು ಮಾಡಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಕೈ ಗೊಂಡು ಅಣೆಕಟ್ಟುಗಳನ್ನು ಕಟ್ಟಿಸಿ, ರೈತರಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಿಕೊಡುತ್ತಿರುವ ರೀತಿಯಲ್ಲಿಯೇ ಏತ ನೀರಾವರಿ ಯೋಜನೆಗಳ ಕೆಲಸವನ್ನು ಸಹ ಸರ್ಕಾರದ ಖರ್ಚಿನಲ್ಲಿಯೇ ಏತಕ್ಕೆ ಮಾಡಬಾರದು ? ಬಯಲು ಪ್ರದೇಶಗಳಲ್ಲಿ, ಡ್ರೈ ಲ್ಯಾಂಡ್ ಇರುವ ಕಡೆಗಳಲ್ಲಿ ಸರ್ಕಾರದ ಖರ್ಚಿನಲ್ಲಿ ಅಣೆಕಟ್ಟುಗಳನ್ನು ಕಟ್ಟಿಸಿ, ಪುಕ್ಕಟೆಯಾಗಿ ಕೃಷಿಕಾರರಿಗೆ ನೀರನ್ನು ಒದಗಿಸುವ ರೀತಿಯಲ್ಲಿಯೇ ಏತ ನೀರಾವರಿ ಯೋಜನೆಗಳ ಕೆಲಸವನ್ನು ಸಹ ಏತಕ್ಕೆ ಕೈ ಕೊಳ್ಳಬಾರದು ?

ಶ್ರೀ ಎಚ್ ಡಿ. ದೇವೇಗೌಡ.—ಮಾನ್ಯ ಸದಸ್ಯರು ಸರ್ಕಾರದ ನೀತಿಯ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಈಗ ನಾನು ಉತ್ತರ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ರಾಜ್ಯದಲ್ಲಿ ಶಾಲಾ ಮಕ್ಕಳಿಗೆ ವಿತರಣೆ ಮಾಡುತ್ತಿರುವ ಪೌಷ್ಟಿಕ ಆಹಾರ

೨೮೩. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಶಾಲಾ ಮಕ್ಕಳಿಗೆ ವಿತರಣೆ ಮಾಡುತ್ತಿರುವ ಪೌಷ್ಟಿಕ ಆಹಾರ ಎಲ್ಲೆಲ್ಲಿ ತಯಾರಾಗುತ್ತಿದೆ.

ಆ) ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯಿಂದ ಇದನ್ನು ಪರೀಕ್ಷಿಸಲಾಗಿದೆಯೇ,

ಇ) ಪೌಷ್ಟಿಕಾಂಶದ ಆಹಾರದಲ್ಲಿ ಯಾವ ಯಾವ ಅಂಶಗಳು ಸೇರಿವೆ,

ಈ) ವಿತರಣೆ ಏಜೆನ್ಸಿ ಯಾವ ಆಧಾರದ ಮೇಲೆ ಸರ್ಕಾರ ನೀಡಿದೆ.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಮೈಸೂರು, ಬೆಳಗಾಂ, ಚಿತ್ರದುರ್ಗ ಮತ್ತು ರಾಯಚೂರು.

ಆ) ಹೌದು. ಈ ಆಹಾರ, ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯವರೇ ರೂಪಿಸಿದ್ದಾರೆ.

ಇ) ಜೀವಸತ್ವ ಎ, ಬಿ ೧, ಬಿ ೨, ನಿಕ್ಕಾಶಿನ್, ಫೋಲಿಕ್ ಆಸಿಡ್, ಇವುಗಳನ್ನು ಉಳ್ಳ ಗೋಧಿ ಶೇಂಗಾ, ಬೇಳೆಗಳು ಮತ್ತು ಬೆಲ್ಲ ಸೇರಿವೆ

ಈ) ಸರ್ಕಾರಿ ಸ್ವಾಮ್ಯದ ರಾಜ್ಯ ಅಗ್ರೋಕಾರನ್ಸ್ ಫ್ರಾಡಕ್ಟ್ಸ್ ಇವರಿಗೆ ಲಾಭ ನಷ್ಟಗಳ ಆಧಾರವಿಲ್ಲದೆ, ವಿತರಣೆ ಜವಾಬ್ದಾರಿಯನ್ನು ನೀಡಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಪೌಷ್ಟಿಕ ಆಹಾರವನ್ನು ತಯಾರಿಸಲು ಮೈಸೂರು, ಬೆಳಗಾಂ, ಚಿತ್ರದುರ್ಗ ಮತ್ತು ರಾಯಚೂರು ಜಿಲ್ಲೆಯಲ್ಲಿರುವ ಕೆಲವು ಸೇವಾ ಸಂಸ್ಥೆಗಳಿಗೆ ಅನುಮತಿ ಕೊಟ್ಟಿದ್ದೀರೋ ಅಥವಾ ಖಾಸಗಿಯವರಿಗೆ ಕೊಟ್ಟಿದ್ದೀರೋ? ಇದನ್ನು ತಯಾರಿಸಲು ಯಾವ ನಿಯಮಗಳನ್ನು ಹಾಗೂ ಅರ್ಹತೆಗಳನ್ನು ಇಟ್ಟಿದ್ದೀರಿ?

ಶ್ರೀ ಡಿ. ಮಂಜುನಾಥ್.—ಈಗ ಸರ್ಕಾರಿ ಸ್ವಾಮ್ಯದ ರಾಜ್ಯ ಅಗ್ರೋ ಇಂಡಸ್ಟ್ರೀಸ್ ಪ್ರಾಡಕ್ಟ್ಸ್, ಇವರಿಗೆ ಲಾಭ ನಷ್ಟಗಳ ಆಧಾರವಿಲ್ಲದೆ ವಿತರಣೆ ಜವಾಬ್ದಾರಿಯನ್ನು ನೀಡಿದೆಯೇ ಹೊರತು ಪ್ರೈವೇಟ್ ಏಜೆನ್ಸಿಗಳಿಗೆ ಇದರ ಜವಾಬ್ದಾರಿಯನ್ನು ನೀಡಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈಗ ನೀವು ಮಕ್ಕಳಿಗೆ ವಿತರಣೆ ಮಾಡುತ್ತಿರುವ ಪೌಷ್ಟಿಕ ಆಹಾರ ಕವಿಬೆರಕೆ ಆಗುತ್ತಿದೆ ಎಂದು ಕಳೆದ ಐದಾರು ತಿಂಗಳುಗಳಿಂದ ಕೇಳಿಬರುತ್ತಿದೆ. ಆದ್ದರಿಂದ ಈಗ ವಿತರಣೆ ಮಾಡುತ್ತಿರುವ ಆಹಾರವನ್ನು ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯಿಂದ ಪರೀಕ್ಷೆ ಮಾಡಿಸಿ ಅವರಿಂದ ಒಂದು ನಿಖರವಾದಂಥ ವರದಿಯನ್ನು ಏನಾದರೂ ತರಿಸಿ ಕೊಂಡಿದ್ದೀರಾ?

ಶ್ರೀ ಡಿ. ಮಂಜುನಾಥ್.—ಇಲ್ಲ, ಏಕೆಂದರೆ, ಅಂತಹ ನಿರ್ದಿಷ್ಟವಾದಂಥ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿಲ್ಲ. ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯವರು ಇದನ್ನು ಪರೀಕ್ಷೆ ಮಾಡಿದ ಮೇಲೆಯೇ ವಿತರಣೆ ಮಾಡುತ್ತಿರುವುದು. ಇದು ಎಲ್ಲಿಯಾದರೂ ಕಲಬೆರಕೆಯಾಗಿರುವುದು ತಮ್ಮ ಗಮನಕ್ಕೆ ಬಂದಿದ್ದರೆ, ಅದನ್ನು ನನಗೆ ಬರೆದು ತಿಳಿಸಿ. ನಾನು ವಿಚಾರಣೆ ಮಾಡಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಪೌಷ್ಟಿಕ ಆಹಾರ ಮಕ್ಕಳಿಗೆ ವಿತರಣೆ ಆಗದೆ ಹೊರಗಡೆ ಮಾರಾಟವಾಗುತ್ತಿದೆ ಎಂಬುದು ತಮ್ಮ ಗಮನಕ್ಕೆ ಏನಾದರೂ ಬಂದಿದೆಯೇ ? ಬಂದಿದ್ದರೆ ತಾವು ಏನು ಕ್ರಮ ಕೈಕೊಂಡಿದ್ದೀರಿ?

ಶ್ರೀ ಡಿ. ಮಂಜುನಾಥ್.—ಹೊರಗಡೆ ಮಾರಾಟವಾದಂಥ ಪ್ರಸಂಗ ನನ್ನ ಗಮನಕ್ಕೆ ಬಂದಿಲ್ಲ. ಅಂತಹ ನಿರ್ದಿಷ್ಟವಾದಂಥ ಪ್ರಕರಣ ಮಾನ್ಯ ಸದಸ್ಯರ ಗಮನಕ್ಕೆ ಬಂದಿದ್ದರೆ, ಅದನ್ನು ನನಗೆ ಬರೆದು ತಿಳಿಸಿದರೆ, ನಾನು ಮುಂದಿನ ಕ್ರಮ ಕೈಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಶಾಲಾ ಮಕ್ಕಳಿಗೆ ವಿತರಣೆ ಮಾಡಲು ಈ ಪೌಷ್ಟಿಕ ಆಹಾರವನ್ನು ಖಾಸಗಿಯವರ ಮೂಲಕ ತಾಲ್ಲೂಕ್ ಕೇಂದ್ರಗಳಿಗೆ ಸಾಗಿಸುವ ವ್ಯವಸ್ಥೆ ಏನಿದೆ ಅದು ಸರಿಯಾಗಿ ನಡೆಯುತ್ತಿಲ್ಲ. ಕೆಲವು ತಾಲ್ಲೂಕ್‌ಗಳಿಗೆ ಈ ಆಹಾರ ಸರಿಯಾಗಿ ಬರುತ್ತಿಲ್ಲ. ಇದರ ಜೊತೆಗೆ, ಇಲ್ಲಿ ಜೀವಸತ್ವ ಇರುವಂತಹ ಆಹಾರವನ್ನೇ ಸರಬರಾಜು ಮಾಡಲಾಗುತ್ತಿದೆ ಎಂದು ಇಲ್ಲಿ ಏನು ಹೇಳಿದ್ದೀರಿ, ಇದು ಸರಿಯಲ್ಲ. ಜೀವಸತ್ವ ಇಲ್ಲದ ಆಹಾರವನ್ನು ಸರಬರಾಜು ಮಾಡುತ್ತಿರುವ ಕಾರಣ, ಇದನ್ನು ಮಕ್ಕಳು ಸೇವನೆ ಮಾಡುತ್ತಿಲ್ಲ. ಕಳೆದ ಐದಾರು ತಿಂಗಳುಗಳಿಂದ ಈ ಆಹಾರವನ್ನು ಪರೀಕ್ಷೆ ಮಾಡಿದ್ದರೆ, ಈಗಲಾದರೂ ಒಂದೆರಡು ಕೇಂದ್ರಗಳಿಂದ ಈ ಆಹಾರವನ್ನು ತರಿಸಿಕೊಂಡು ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯಲ್ಲಿ ಪರೀಕ್ಷೆ ಮಾಡಿಸುತ್ತೀರಾ?

ಶ್ರೀ ಡಿ. ಮಂಜುನಾಥ್.—ಮಾನ್ಯ ಸದಸ್ಯರು ಟ್ರಾನ್ಸ್‌ಪೋರ್ಟ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಆ ಬಗ್ಗೆ ಹೇಳುವುದಾದರೆ ಟೆಂಡರ್ ಕರೆಯುತ್ತೇವೆ. ಯಾರು ಲೋಯರ್ಸ್ಟ್ ಟೆಂಡರ್ ಕಳುಹಿಸಿಕೊಟ್ಟಿರುತ್ತಾರೋ ಅಂತಹ ಟೆಂಡರ್ ಅನ್ನು ಆಕ್ಸೆಪ್ಟ್ ಮಾಡಿಕೊಳ್ಳುತ್ತೇವೆ. ಈಗ ಮಾನ್ಯ ಸದಸ್ಯರು ಏನು ಸಲಹೆಯನ್ನು ಕೊಟ್ಟಿದ್ದಾರೋ ಆ ಸಲಹೆಯನ್ನು ಇನ್ನು ಮುಂದೆ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು.

ಬ್ಯಾಡಗಿ ತಾಲ್ಲೂಕಿನಲ್ಲಿರುವ ಶಾಲಾ ಕಟ್ಟಡಗಳು

೧೭೭. ಶ್ರೀ ಕೆ. ಎಸ್. ಬೀಳಗಿ.—(ಬ್ಯಾಡಗಿ)[ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆ ಬ್ಯಾಡಗಿ ತಾಲ್ಲೂಕಿನಲ್ಲಿರುವ ಸ್ವಂತ ಕಟ್ಟಡಗಳಲ್ಲಿರುವ ಸರ್ಕಾರಿ ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು?